


ಶುರುವಾಗುತ್ತದೆ. ನಾವು ಅಲ್ಲಿಂದ ಸುಮಾರು ನಲವತ್ತು ಕಿ.ಮೀ. ದೂರವನ್ನು ಕ್ಷಿಪ್ರವಾಗಿ ಕ್ರಮಿಸಬೇಕಿತ್ತು. ಆದರೆ ಇಲ್ಲಿನ ಕಾಡಿನ ರಸ್ತೆಯನ್ನು ಸವೆಸುವುದು ಅಷ್ಟು ಸಲೀಸಲ್ಲ. ಸಿಕ್ಕಾಪಟ್ಟೆ ಎಡವಟ್ಟು. ಅನೇಕ ಕಡೆ ರಸ್ತೆಯೇ ಇಲ್ಲ. ಬಂಡೆ ಕಲ್ಲುಗಳ ಹತ್ತಿಳಿದು ಹತ್ತು ಸಲ ಸಿಗುವ ರಾಮಗಂಗಾ ನದಿಯನ್ನು ಮತ್ತೆಮತ್ತೆ ದಾಟಬೇಕಿತ್ತು. ಬಹಳಷ್ಟು ಕಡೆ ನದಿಗೆ ಸೇತುವೆ ಇಲ್ಲದ ಕಾರಣ ಹರಿವ ನೀರಿನ ಮೂಲಕ ಜೀಪು ಹಾಯಬೇಕಿತ್ತು. ಕೆಳಗೆ ಯಮಗಾತ್ರದ ಬಂಡೆಗಳು. ಜೊತೆಗೆ ಆದಿಲ್ ಸಾಹೇಬನ ತೀವ್ರ ವೇಗದ ಚಾಲನೆ.

ಹೆಚ್ಚು ಮಾತಾಡದ ನಮ್ಮ ಸೈಲೆಂಟ್ ಹುಡುಗ ಅವಿನಾಶ್ ನೋಂಪಿ "ಏನ್ ಸಾರ್ ಇವನು ಕಿಡ್ನಾಪ್ ಮಾಡಿ ವಿಲನ್ ಎತ್ತಾಕಿಕೊಂಡು ಹೋಗೋ ತರ ನಮ್ಮನ್ನು ಸಾಗಿಸುತ್ತಿದ್ದಾನೆ. ನಮ್ಮ ಕೈ ಕಾಲುಗಳು ಕಳಚಿ ಬಿದ್ದು ಬಾಡಿಯ ಬಿಡಿ ಭಾಗಗಳನ್ನು ಗೋಣಿಚೀಲದಲ್ಲಿ ತುಂಬಿ ಕೊಡ್ತಾನೋ ಏನೋ?" ಎಂದು ತಮಾಷೆ ಮಾಡತೊಡಗಿದ. ಆ ತುಳುಕಾಟದಲ್ಲಿ ನಮ್ಮ ಹೈಬ್ರೀಡ್ ದೇಹಗಳ ಜತೆಗೆ, ದುಬಾರಿ ಕ್ಯಾಮೆರಾ ಮತ್ತು ಸೂಕ್ಷ್ಮ ಪ್ರಕೃತಿಯ ಲೆನ್ಸ್ ಗಳ ಮಾನ ಪ್ರಾಣವನ್ನು ಕಾಪಾಡಿಕೊಳ್ಳುವ ಕಸರತ್ತು ಬಲು ಸಾಹಸಮಯವಾಗಿ ಕಾಣುತ್ತಿತ್ತು. ಅಕ್ಷರಶಃ ಅವನು ಬಿರುಗಾಳಿಯಂತೆ ಜೀಪು ಓಡಿಸುತ್ತಿದ್ದ.

ಪಕ್ಕದಲ್ಲಿ ಹರಿಯುವ ಸುಂದರವಾದ ನದಿ ಅದರಾಚೆಯ ಬೆಟ್ಟಗಳ ಮೇಲೆ ಬೆಳೆದು ನಿಂತ ದೈತ್ಯ ಮರಗಳು ಮೋಹಕ ಎನಿಸುತ್ತಿದ್ದವು. ಸಡನ್ನಾಗಿ ಸಿಗುವ ಆಘಾತಕಾರಿ ತಿರುವುಗಳಲ್ಲಿ ಜೇಮ್ಸ್ ಬಾಂಡ್ ರೀತಿ ವೇಗವಾಗಿ ಜೀಪು ತಿರುಗಿಸಿ ನಮಗೆ ದಿಗಿಲು ಹುಟ್ಟಿಸಿದ್ದ ಆದಿಲ್. ಧಡಬಢ ಎತ್ತಾಕುವ ಜೀಪಿನಲ್ಲಿ ಪ್ರಾಣ ಜೋಪಾನ ಮಾಡಿಕೊಳ್ಳುವುದೋ? ನಿಸರ್ಗ ಸೌಂದರ್ಯವನ್ನು ಸವಿಯುವುದೋ? ಗೊತ್ತಾಗದೆ ಹಣ್ಣುಗಾಯಿ ನೀರುಗಾಯಿಯಾದೆವು. ನರಕ ತೋರಿಸಿದ ಅವನ ಚಾಲನೆ ಮಧ್ಯಾಹ್ನ ಒಂದು ಗಂಟೆಗೆ ಮುಗಿಯಿತು. ಹಿಂದೆ ಇಟ್ಟಿದ್ದ ನಮ್ಮ ಬ್ಯಾಗುಗಳು ಕೆಸರಿನ ಮುದ್ದೆಯಾಗಿದ್ದವು.

ಡಿಕಾಲ ಎಂಬ ಸುಂದರ ಜಾಗೆಯಲ್ಲಿ ಆದಿಲ್ ನಾವು ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದ. ಇದು ಸಂಪೂರ್ಣ ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿತ್ತು. ಪ್ರವಾಸಿಗಳ ಆಗಮನ ಮತ್ತು ನಿರ್ಗಮನದ ವಿಷಯದಲ್ಲಿ ಸಮಯಪ್ರಜ್ಞೆ ಕಟ್ಟುನಿಟ್ಟಾಗಿತ್ತು. ನೀತಿ, ನಿಯಮಗಳ ಉದ್ದ ಪಟ್ಟಿಯೂ ಸಿಕ್ಕಿತು. ಬೇಲಿ ದಾಟಿ ಆಚೆ ಹೋಗಬಾರದು. ಹಿನ್ನೀರಿಗೆ ಇಳಿಯಬಾರದು. ರಾತ್ರಿ ಹೊರಗೆ ಬರಬಾರದು ಇತ್ಯಾದಿಗಳು. ಇಲ್ಲಿನ ಊಟ ತಿಂಡಿ ಮಾತ್ರ ಜೈಲಿಗಿಂತ ಕಡೆಯಾಗಿತ್ತು.